# ದೊಡ್ಡವರಿಗೊಂದು ನ್ಯಾಯ, ..!

ಬಿಟೌನ್‌ನಲ್ಲಿ ಅಸಮಾನತೆ ಮತ್ತು ತಾರತಮ್ಯದ ಕುರಿತ ಮಾತುಗಳು ಆಗಾಗ ಕೇಳಿ ಬರುತ್ತಿರುತ್ತವೆ. ಹಾಗೆಯೇ ಬಿಟೌನ್‌ನ ಕುರಿತ ಹೊರಗಿನ ಜಗತ್ತು ಆಡುವ ಮಾತುಗಳಲ್ಲಿಯೂ ಈ ತಾರತಮ್ಯ ಹೊರತೇನಲ್ಲ. ಬಾಲಿವುಡ್‌ನ ದೊಡ್ಡವರು ಮತ್ತು ಚಿಕ್ಕವರ, ಅದರಲ್ಲೂ ಹಸಿ ಬಿಸಿ ಸನ್ನಿವೇಶಗಳ ಬಗ್ಗೆ ಎರಡು ರೀತಿಯಲ್ಲಿ ಮಾತನಾಡುವವರ ಮೇಲೆ ಸಿಟ್ಟನ್ನು ಹೊರಹಾಕಿದ್ದಾಳೆ ಜರೀನ್ ಖಾನ್.

ಬಾಲಿವುಡ್‌ನಲ್ಲಿ ದೊಡ್ಡ ದೊಡ್ಡ ಸ್ಟಾರ್‌ಗಳು ಇಂತಹ ಹಸಿಬಿಸಿ ದೃಶ್ಯಗಳಲ್ಲಿ ಕಾಣಿಸಿಕೊಂಡರೆ, ಅದಕ್ಕೆ ದೊರಕುವ ಪ್ರತಿಕ್ರಿಯೆಯೇ ಬೇರೆ. ತನ್ನಂತ ಚಿಕ್ಕವರು ಹಾಗೆ ಕಾಣಿಸಿಕೊಂಡರೆ ಅದು ಕೀಳಾಗಿ ಕಾಣಿಸುತ್ತದೆ ಎನ್ನುವುದು ಆಕೆಯ ಆಕ್ರೋಶ.

ಕಳೆದ ವರ್ಷ 'ಹೇಟ್ ಸ್ಟೋರಿ 3'ಯಲ್ಲಿ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಳು ಜರೀನ್. ಅದಕ್ಕೆ ಬಂದಿರುವ ಪ್ರತಿಕ್ರಿಯೆ ಆಕೆಯ ಈ ಕೋಪಕ್ಕೆ ಕಾರಣ. 'ಒಂದು ವೇಳೆ ಇದೇ ಪಾತ್ರವನ್ನು ಹೆಸರಾಂತ ನಟಿ ಮಾಡಿದ್ದರೆ, ಅದಕ್ಕೆ 'ವಾವ್', 'ಓ ಮೈ ಗಾಡ್', 'ಲುಕಿಂಗ್ ಸೋ ಹಾಟ್' ಹಾಗೆ ಹೀಗೆ ಎಂಬ ಭಾರಿ ಮೆಚ್ಚುಗೆ ವ್ಯಕ್ತವಾಗುತ್ತಿತ್ತು. ಆದರೆ ಅಷ್ಟಾಗಿ ಜನಪ್ರಿಯರಲ್ಲದ ಹೆಸರು ಕಂಡರೆ ಅದನ್ನು ಕಸ ಎಂದೇ ಕರೆಯುತ್ತಾರೆ, ಜನ ಹೀಯಾಳಿಸಲು ಶುರು ಮಾಡುತ್ತಾರೆ' ಎಂದಿದ್ದಾಳೆ ಜರೀನ್.

'ಈ ರೀತಿ ಏಕೆ ಕಡೆಗಣಿಸುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಆದರೆ ನನ್ನ ಕುರಿತು ಈ ರೀತಿಯ ಅವಹೇಳನೆಯ ಮಾತುಗಳನ್ನಾಡಲು ಅವಕಾಶ ನೀಡುವುದಿಲ್ಲ. ಇವುಗಳಿಂದ ನಾನು ತಲೆಕೆಡಿಸಿಕೊಂಡಿಲ್ಲ. ನಾನಿಲ್ಲಿಗೆ ಬಂದಿರುವುದು ನನ್ನ ಕೆಲಸ ಮಾಡಲು. ಇಷ್ಟು ವರ್ಷಗಳಲ್ಲಿ ಸಾಕಷ್ಟು ಕಲಿತಿದ್ದೇನೆ ಎನಿಸುತ್ತಿದೆ' ಎಂದು ಹೇಳಿದ್ದಾಳೆ.

ಆಕೆಯ ಪ್ರಕಾರ ನಮ್ಮ ದೇಶದಲ್ಲಿ ಅನೇಕರು ಬೋಲ್ಡ್ ದೃಶ್ಯಗಳನ್ನು ಅಶ್ಲೀಲ ಎಂದು ಅಸಹ್ಯ ಪಡುತ್ತಾರೆ. ಆದರೆ ಅವರೇ ಮೊದಲು ವೀಕ್ಷಿಸುತ್ತಾರೆ.

'ಹಸಿಬಿಸಿ ಸನ್ನಿವೇಶಗಳ ಚಿತ್ರೀಕರಣದ ವೇಳೆ ನಮ್ಮ ತಲೆಯಲ್ಲಿ ನೂರಾರು ಯೋಚನೆಗಳು ಬರುತ್ತವೆ. ತೆರೆಯ ಮೇಲೆ ಅದು ಆಪ್ತವಾಗಿ ಅಥವಾ ಬೋಲ್ಡ್ ಆಗಿ ಕಾಣಿಸಬಹುದು. ಆದರೆ ಚಿತ್ರೀಕರಣ ಮಾಡುವಾಗ ಅನೇಕ ಸಂಗತಿಗಳ ಬಗ್ಗೆ ನಾವು ಎಚ್ಚರ ವಹಿಸಬೇಕು' ಎಂದು ಬೋಲ್ಡ್ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ತನ್ನ ಅನುಭವದ ಆಧಾರದಲ್ಲಿ ಹೇಳಿಕೊಂಡಿದ್ದಾಳೆ ಜರೀನ್.



## ಗಾಂಭೀರ್ಯ ಹಾಳು ಮಾಡುವ ನಿರ್ದೇಶಕರು!



ಬಿಟೌನ್‌ನ ಈಗಿನ ಅತಿ ವಿವಾದಾತ್ಮಕ ನಟ ಯಾರು ಎಂದರೆ, ಎಲ್ಲರೂ ಬೊಟ್ಟು ಮಾಡುವುದು ಹಿರಿಯ ನಟ ನಾಸಿರುದ್ದೀನ್ ಷಾ ಅವರತ್ತ. ರಾಜೇಶ್ ಖನ್ನಾ ಕೆಟ್ಟ ನಟ ಎನ್ನುವ ಮೂಲಕ ದೊಡ್ಡ ವಿವಾದದ ಕಿಡಿ ಹಚ್ಚಿಸಿದ್ದ ನಾಸಿರುದ್ದೀನ್, ಬಳಿಕ ಕ್ಷಮೆ ಕೇಳಿದ್ದರು. ಷಾ ಇಂತಹ ಹೇಳಿಕೆ ನೀಡುವುದು ಹೊಸತೇನಲ್ಲ. ಚಿತ್ರರಂಗದಲ್ಲಿ ಸಿನಿಮಾ ಮತ್ತು ಕ್ರಿಕೆಟ್ ದಿಗ್ಗಜರ ಜೀವನಗಾಥೆಯನ್ನು ತೆರೆಗೆ ತರುವ ಪ್ರಯತ್ನಗಳು ಜಿದ್ದಿಗೆ ಬಿದ್ದಂತೆ ನಡೆಯುತ್ತಿದೆ. ಇಂತಹ ಸಿನಿಮಾಗಳನ್ನು ಮಾಡುವುದನ್ನು ನಿಲ್ಲಿಸುವುದು ಒಳಿತು ಎಂದಿದ್ದಾರೆ ಷಾ.

ಕಿಶೋರ್ ಕುಮಾರ್ ಮತ್ತು ಆರ್.ಡಿ. ಬರ್ಮನ್ ಅವರಂತಹ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಸಿನಿಮಾ ಮಾಡಬಾರದು. ಏಕೆಂದರೆ ವಾಣಿಜ್ಯಾತ್ಮಕ ಸಿನಿಮಾಗಳ ನಿರ್ಮಾತೃಗಳು ಅವರ ಕಥೆಯನ್ನು ಕುಲಗೆಡಿಸಿ ಬಿಡುತ್ತಾರೆ ಎನ್ನುವುದು ಷಾ ಅನಿಸಿಕೆ. ಹಾಗೆಯೇ ಖ್ಯಾತ ನಿರ್ದೇಶಕ, ನಟ ಗುರುದತ್ ಅವರ ಬದುಕನ್ನೂ ಸಿನಿಮಾ ರೂಪಕ್ಕೆ ಇಳಿಸುವ ಕಾರ್ಯ ನಡೆಯುತ್ತಿದೆ ಎಂಬ ಸುದ್ದಿ ಕೇಳಿದೆ. ಆದರೆ ಈ ಚಿತ್ರವನ್ನು ಮಾಡದೆ ಇರುವುದೇ ಒಳಿತು ಎಂದಿದ್ದಾರೆ ಅವರು.

ವಾಣಿಜ್ಯ ಸಿನಿಮಾಗಳ ನಿರ್ಮಾತೃಗಳು ಬೇಕಿದ್ದರೆ ಹಾಡು ಮತ್ತು ಕುಣಿತದ ಸಿನಿಮಾಗಳನ್ನು ಮಾಡಿಕೊಂಡಿದ್ದರೆ ಸಾಕು. ಕಮರ್ಷಿಯಲ್ ಸಿನಿಮಾ ನಿರ್ದೇಶಕರು ಗಂಭೀರ ವಸ್ತುಗಳನ್ನು ಮುಟ್ಟಬಾರದು. ಅವುಗಳನ್ನು ಸಂಪೂರ್ಣವಾಗಿ ಹಾಳುಗೆಡವುತ್ತಾರೆ ಎಂದು ಹರಿಹಾಯ್ದಿದ್ದಾರೆ ಷಾ.

'ನನ್ನಂತೆ ಸಿನಿಮಾದ ಅನಿವಾರ್ಯತೆ ಇದ್ದ ಜನರಿದ್ದ ಸಮಯದಲ್ಲಿ ಚಿತ್ರರಂಗಕ್ಕೆ ಬಂದದ್ದು ನನ್ನ ಅದೃಷ್ಟ. ಅದು ನನ್ನ ಪಾಲಿನ ವರ. ನವಾಜುದ್ದೀನ್ ಸಿದ್ದಿಕಿ ಅಥವಾ ಇರ್ಫಾನ್ ಖಾನ್ ಅವರಂತಹ ನಟರು ಅನುಭವಿಸಿದಂತೆ ನಾನು ಸುದೀರ್ಘ ಹಾಗೂ ಕಠಿಣ ಕಷ್ಟಗಳನ್ನು ಅನುಭವಿಸಲಿಲ್ಲ ಎನ್ನುವುದು ನಿಜ. ಅವರೀಗ ಯಶಸ್ಸನ್ನು ಕಾಣುತ್ತಿದ್ದಾರೆ. ಆದರೆ ಅದಕ್ಕಾಗಿ ಸಾಕಷ್ಟು ಸಮಯ ಕಾದಿದ್ದರು' ಎಂದು ಮೆಚ್ಚುಗೆ ಮಾತನ್ನೂ ಆಡಿದ್ದಾರೆ ಅವರು.

■ ಅಮಿ